ಎಲೆ ಕೈಗಳಿರಾ ಬದುಕಿದಿರೆನುತಂ
ಎಲೆ ಕಣ್ಗಳಿರಾ ನಲವಿಂ ನೋಡಿರೆ
ಎಲೆ ಕಿವಿಗಳಿರಾ ಒಲವಿಂ ಕೇಳಿರೆ
ಎಲೆ ಮನವೇ ಫಲವಹುದೇನೆನುತಂ...
ನನ್ನಂ ತಾನೇ ವಂದಿಸಿಕೊಳುತಂ... ಎಂದು ವಿವರಿಸುತ್ತಾನೆ.

ಹರಿಹರನು ಚಿತ್ರಿಸುವ ಪಾತ್ರಗಳು ಕತ್ತಿ, ಗುರಾಣಿ ಹಿಡಿದು ಯುದ್ಧಕ್ಕೆ ಹೊರಡುವಂಥವರಲ್ಲ. ಸರಳ ಜೀವನ ನಡೆಸುವ, ಭಕ್ತಿ ಸ್ವರೂಪವನ್ನೂ ಸರಿಯಾಗಿ ಅರಿಯದ, ಆದರೆ ಅದು ಅವರ ಅಂತರಂಗದಲ್ಲೇ ಸಹಜವಾಗಿರಬಹುದಾದ ಮುಗ್ಧ ಜೀವಗಳು. ವಚನ ಚಳವಳಿಯ ನಂತರ ಅಲ್ಪ ಕಾಲಾಂತರದಲ್ಲೇ ಬಂದ ಹರಿಹರನ ಅಪಾರ ಕರುಣೆಯ ಅಂತಃಚಕ್ಷುವಿಗೆ ಕಂಡುಬಂದ ಪಾತ್ರಗಳೆಲ್ಲ ಇಂಥವೇ! ಮೆಟ್ಟು ಹೊಲೆಯುವವರು, ಬಟ್ಟೆ ಒಗೆಯುವವರು, ಮಡಕೆ ತಟ್ಟುವವರು, ಬಿಟ್ಟಿ ಜೀತದವರು, ಬೇಟೆಯಾಡುವವರು, ಬೇಸಾಯ ಹೊಡೆಯುವವರು ಇಂಥವರೆಲ್ಲ ಎಂಟುನೂರು ವರ್ಷಗಳ ಹಿಂದೆಯೇ ಒಬ್ಬ ಅಸಾಧಾರಣ ಸಾಮಾಜಿಕ ಚಿಂತನ ಶಕ್ತಿಯುಳ್ಳ ಕವಿಯ ಕರುಣೆ ತುಂಬಿದ ಅಂತರಂಗಕ್ಕೆ ಬಂದು ಅವರೆಲ್ಲ ತಮ್ಮ ಮುಗ್ಧ ಭಕ್ತಿಯ, ಕಾಯಕನಿಷ್ಠೆಯ ಶಾಶ್ವತ ಗೌರವಾನ್ವಿತ ಪಾತ್ರಗಳಾಗಿಬಿಟ್ಟರು. ಹರಿಹರನ ಕಥನಗಳಲ್ಲಿ ಶಿರಕ್ಕೆ ಕಿರೀಟ ಏರಿಸಿದವರೂ ಈ ಮುಗ್ಧ ಸಂತರ ಮುಂದೆ ಕತ್ತಿ ಕಳಚಿಟ್ಟು ನಡುಬಗ್ಗಿಸಿ ತಮ್ಮ ಬಯಲಾಡಂಬರದ ನಿಸ್ಸತ್ವ ವ್ಯಕ್ತಿತ್ವವನ್ನು ಒಪ್ಪಿಕೊಳ್ಳುತ್ತಾರೆ. ಹಾಗೆ ನೋಡಿಕೊಂಡರೆ ಈ ನಿರಂತರ ಭಕ್ತಿಯ ಅಸಂಖ್ಯಾತ ಪಾತ್ರಗಳು ತಂತಮ್ಮ ಭಕ್ತಿಯ ಭಾರದಲ್ಲಿ ಏಕತಾನತೆ ಅಥವಾ ಕೃತಕ ರೀತಿಯ ಸೂತ್ರದ ಗೊಂಬೆಗಳಾಗಿ ಕಾಣಿಸಿ ಓದುಗ ವೃಂದಕ್ಕೆ ತಲೆ ಬೇನೆ ತರಬೇಕಿತ್ತು. ಆದರೆ, ಹರಿಹರನ ವ್ಯಾಪಕ ಸುತ್ತಾಟ, ಲೋಕಾನುಭವ, ಅಸಾಧಾರಣ ಸೃಜನಶೀಲತೆ, ಶಬ್ದ ಬ್ರಹ್ಮಶಕ್ತಿಯ ಬಾಹುಳ್ಯ ಇವು ಅವನ ನೂರಾರು ಕಥಾನಕಗಳ ಭಕ್ತ ಪಾತ್ರಗಳನ್ನು, ಒಮ್ಮೊಮ್ಮೆ ಅವು ಪವಾಡದ ನೆಲೆಯಲ್ಲಿದ್ದರೂ ಅದನ್ನೂ ಜೀವಂತಗೊಳಿಸಿಬಿಟ್ಟಿದ್ದಾನೆ.

ತಿರುನಾಳ್ ಪೋವರಂಥಾ ಒಂದು ಪಾತ್ರ ಪೊನ್ನಾಂಬಲದ ಜಾತ್ರೆಗೆ ನಡೆಯುವ ಕ್ರಮವನ್ನು ಹರಿಹರ ವಿವರಿಸುವ ರೀತಿ ಅದು ಬರಿದೇ ಕಲ್ಪಿಸಿ ಹೇಳಿರುವಂಥದ್ದಲ್ಲ! ಉತ್ತರ ಕರ್ನಾಟಕದ ಎಲ್ಲಮ್ಮನ ಗುಡ್ಡಕ್ಕೆ, ಮಧ್ಯ ಕರ್ನಾಟಕದ ಶರಣ ತಿಪ್ಪೇಸ್ವಾಮಿಯ ಜಾತ್ರೆಗೆ, ದಕ್ಷಿಣ ಕರ್ನಾಟಕದ ಮಲೆಯ ಮಾದಪ್ಪನ ಯಾತ್ರೆಗೆ, ನಿತ್ಯದ ಅನ್ನಕ್ಕೆ ಬಡಿದಾಡಿ ಬದುಕುತ್ತಿದ್ದ ಲಕ್ಷಾಂತರ ಜನಸಮೂಹ, ತಾವು ನಂಬಿದ ಸಂತನನ್ನು ಕಂಡು ಮಾತನಾಡಿಸಿಯೇ ಬರಲು ಹೋಗುತ್ತಿದ್ದೇವೆಂಬ ಅಮಿತಾನಂದದಲ್ಲಿ ಹಾಡುತ್ತ, ಕುಣಿಯುತ್ತ ಹೋಗುತ್ತಿದ್ದುದನ್ನು ಹರಿಹರ ತನ್ನ ಸುತ್ತಾಟದಲ್ಲಿ ಕಂಡು, ತಿರುನಾಳ್ ಪೋವರನ್ನು ಅಂಥ ಸಮೂಹದ ಪ್ರತಿನಿಧಿಯನ್ನಾಗಿಸಿ ಬರೆಯುತ್ತಾನೆಂಬುದನ್ನು ಓದುಗರು ಗಮನಿಸಬೇಕು. ಈ ತಿರುನಾಳ್ ಪೋವನಿಗೆ ಜಾತ್ರೆಯಲ್ಲಿ ನಂದೀಶ್ವರನ ಮೂಲಕ ಶಿವನ ದರ್ಶನವಾಗುತ್ತದೆಂಬುದು ಭಾರತೀಯ ಪರಂಪರೆಯ ಕಥಾನಕಗಳ ಯಥಾವಿಧಿ ಸಂಗತಿ. ಹರಿಹರ ನಿರೂಪಿಸುವ ಈ ಬಗೆಯ ಜೀತಗಾರರು, ಬಿಟ್ಟಿ ಕೂಲಿಗಳನ್ನು ಶತಶತಮಾನಗಳಲ್ಲಿ ಪೊರೆದದ್ದು ಅರಮನೆಗಳಲ್ಲ. ಹಾಗೆ ನಿಜಕ್ಕೂ ಅವೇ ಆಗಿದ್ದರೆ ಹರಿಹರ ಅರಸೊತ್ತಿಗೆಯ ಸಮೂಹವನ್ನು ಅಷ್ಟು ಕಡೆಗಣಿಸಿ, ಮಾತನಾಡುತ್ತಿರಲಿಲ್ಲ. ಇತಿಹಾಸದಲ್ಲಿ ಜರುಗಿಹೋದ ಅನೇಕ ದುರಿತಗಳ ನಡುವೆ ಬದುಕು ಕಳೆದುಕೊಳ್ಳುತ್ತಿದ್ದ ತಳಸಮೂಹಗಳ ಒಳಿತಿಗೆ ಅಧಿಕಾರದ ಎದುರು ಹೊಡೆದಾಡಿದವರು ಸಂತರು. ಆ ಕಾರಣಕ್ಕೆ ಅವರ ಸಮಾಧಿ ಸ್ಥಳಗಳಿಗೆ ಈ ಹೊತ್ತೂ ಲಕ್ಷಾಂತರ ಸಂಖ್ಯೆಯ ಜನ 'ನಡೆ'ಯುತ್ತಾರೆ.